ದಿನಾಂಕ 14.08.2019 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರಿದ ಪಾಟೀಸವಾಲುಃ- ಆರೋಪಿಗಳ ಪರವಾಗಿ ಶ್ರೀ.ಬಿ.ಆರ್. ವಕೀಲರಿಂದಃ**

**42.** ನನ್ನ ಅಳಿಯ ಮತ್ತು ನನ್ನ ಬೀಗರು ಆರ್ಥಿಕವಾಗಿ ಸಬಲರು ಎಂದರೆ ಸರಿ. ನನ್ನ ಮಗಳು ಬಾಣಂತನದ ಸಲುವಾಗಿ 9 ತಿಂಗಳುಗಳ

ಕಾಲ ನಮ್ಮ ಮನೆಯಲ್ಲಿ ಇದ್ದಳು. ನಂತರ ನಾವೇ ಆಕೆಯನ್ನು ಗಂಡನ ಮನೆಗೆ ಬಿಟ್ಟು ಬಂದೆವು.

**43.** ನನ್ನ ಅಳಿಯ ಅವರ ಊರಿನಲ್ಲಿ ಮನೆ ಕಟ್ಟಲು ಪ್ರಯತ್ನಿಸಿದ್ದರು ಎಂದರೆ ಸರಿ. ನನ್ನ ಮಗಳಿಗೆ ಮನೆಯನ್ನು ಬಿಡದಿ ಅಥವಾ ಬೆಂಗಳೂರು ಸ್ಥಳಗಳಲ್ಲಿ ನಿರ್ಮಿಸಬೇಕು ಎನ್ನುವ ಆಸೆ ಇತ್ತು ಎಂದರೆ ಸರಿಯಲ್ಲ.

**44.** 4 ನೇ ತಿಂಗಳು ಜಯದೇವ ಆಸ್ಪತ್ರೆಗೆ ನಾನು ಸಹ ನನ್ನ ಮಗಳು ಅಳಿಯನ ಜೊತೆಯಲ್ಲಿ ಹೋಗಿದ್ದೆನು. ದಿನಾಂಕ 24.05.2012 ರಂದು ಮಗುವಿನ ಮೊದಲನೇ ವರ್ಷದ ಹುಟ್ಟುಹಬ್ಬವಿತ್ತು ಎಂದರೆ ಸರಿ. 4 ನೇ ತಿಂಗಳು ಆಸ್ಪತ್ರೆಗೆ ಹೋಗುವ ಸಲುವಾಗಿ ನಿಮ್ಮ ಮಗ ಮತ್ತು ಅಳಿಯ ಬಂದಿದ್ದಾಗ, ಮಗುವಿನ ಹುಟ್ಟಿದ ಹಬ್ಬದ ಹಿನ್ನೆಲೆಯಲ್ಲಿ ಮಗುವಿಗೆ ಬಟ್ಟೆಬರೆಗಳನ್ನು ಖರೀದಿಸಿ ಹೋಗಿರುತ್ತಾರೆ ಎಂದರೆ ಸರಿ. ನನ್ನನ್ನು ಸಹ ಹುಟ್ಟುಹಬ್ಬ ಆಚಾರಣೆಗೆ ಕರೆದಿದ್ದರು. 4 ನೇ ತಿಂಗಳಿನಲ್ಲಿ ಆಸ್ಪತ್ರೆಗೆ ಬಂದ ದಿನವನ್ನು ಹೊರತು ಪಡಿಸಿದ ನಂತರದ ದಿನಗಳಲ್ಲಿ ನನ್ನ ಅಳಿಯ ಮತ್ತು ಮಗಳು ಬಂದಿರುವುದಿಲ್ಲ. ಮಗುವಿಗೆ ರಾತ್ರಿಯ ಸಮಯದಲ್ಲಿ ಜ್ವರ ಬರುತ್ತದೆ ಎಂಬುವುದಾಗಿ ನನ್ನ ಮಗಳು ನನಗೆ

ತಿಳಿಸಿದ್ದಳು. ನನ್ನ ಊರು ಆಸ್ಪತ್ರೆಗೆ ಹೋಗಲು ಅನುಕೂಲವಾಗಿದೆ ಎಂದು ಸೂಚಿಸಿದಂತೆ ನಾನು ನುಡಿದಿರಲಿಲ್ಲ.

**45.** ನನ್ನ ಅಳಿಯ ಕೃತ್ಯದ ದಿನದಂದು ನನ್ನ ಮಗಳನ್ನು ಖಾಸಗಿ ಕಾರು ವಾಹನವೊಂದರಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂಬ ಸಂಗತಿ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನನ್ನ ಮಗಳನ್ನು ಯಾರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂಬುವುದಾಗಿ ನಾನು ತಿಳಿದುಕೊಂಡಿರುವುದಿಲ್ಲ.

**46.** ನನ್ನ ಅಳಿಯ ಯಾವ ಕಾಲಕ್ಕೂ ನನ್ನಲ್ಲಿ ರೂ.30,000/- ಗಳಿಗೆ ಬೇಡಿಕೆ ಇಟ್ಟಿರಲಿಲ್ಲ ಹಾಗು ಈ ಬಗ್ಗೆ ನನ್ನ ಹೇಳಿಕೆ ಕಾಲ್ಪನಿಕ ಎಂದರೆ ಸರಿಯಲ್ಲ. ಕೃತ್ಯದ ದಿನದ ಸಮಯದಲ್ಲಿ ನನ್ನ ಅಳಿಯನಿಗೆ ಸಂಬಳ ಮಾಸಿಕ ರೂ.30,000/- ವಿತ್ತು ಎಂದರೆ ಅವರ ಸಂಬಳದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ರೂ.30,000/- ಗಳಿಗೆ ಬೇಡಿಕೆ ಸಲ್ಲಿಸುವ ಅಗತ್ಯತೆ ನನ್ನ ಅಳಿಯನಿಗೆ ಇರಲಿಲ್ಲ, ಕಾರಣ ನನ್ನ ಹೇಳಿಕೆ ಅಸತ್ಯ ಎಂದರೆ ಸರಿಯಲ್ಲ.

**47.** ನನ್ನ ಅಳಿಯ ಊರಿನಲ್ಲಿ ಮನೆಯನ್ನು ನಿರ್ಮಿಸಿ ತನ್ನ ತಂದೆತಾಯಿಗಳನ್ನು ನೋಡಿಕೊಳ್ಳುವ ನಿರ್ಧಾರಕ್ಕೆ ಬರದೇ ಇದ್ದಿದ್ದರೇ ನನ್ನ ಮಗಳ ಸಾವಿನ ಘಟನೆ ಸಂಭವಿಸುತ್ತಿರಲಿಲ್ಲ ಎಂದರೆ ತಪ್ಪು. ನನ್ನ

ಮಗಳು ಬಾಣಂತನ ಮುಗಿಸಿ ತನ್ನ ಗಂಡನ ಮನೆಗೆ ಹೋದ ಬಳಿಕ ನಾನು ಆಕೆಯನ್ನು ಆಕೆಯ ಗಂಡನ ಮನೆಯಲ್ಲಿ ಭೇಟಿ ಮಾಡಿದ್ದೆನು. ಆಕೆ ನಮ್ಮ ಮನೆಗೆ ಬಂದಿರಲಿಲ್ಲ. ನನ್ನ ಮಗಳ ಬಳಿ ಫೋನ್ ಇರಲಿಲ್ಲ, ಪರಿಣಾಮ ಆಕೆ ಫೋನ್‌ನ ಮುಖೇನ ನನಗೆ ವಿಷಯ ತಿಳಿಸುವ ಪ್ರಮೇಯ ಇಲ್ಲ ಎಂದರೆ ತಪ್ಪು.

**48.** ನಾನು ಯಾವುದೇ ಪರಚಿದ ಗಾಯಗಳನ್ನು, ರಕ್ತಸ್ರಾವವನ್ನು ನನ್ನ ಮಗಳ ದೇಹದಲ್ಲಿ ಗಮನಿಸಿರುವುದಿಲ್ಲ ಈ ಬಗ್ಗೆ ನನ್ನ ಹೇಳಿಕೆ ಕಾಲ್ಪನಿಕ ಎಂದರೆ ಸರಿಯಲ್ಲ. ನನ್ನ ಮಗಳ ಸಾವಿಗೆ ನನ್ನ ಅಳಿಯ ಮತ್ತು ಬೀಗರು ಕಾರಣರಲ್ಲ ಎಂದರೆ ಸರಿಯಲ್ಲ. ನನ್ನ ಯಜಮಾನರ ಮಾತಿನ ಮುಲಾಜಿಗೆ ನಾನು ಅಸತ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.